## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 456**

**ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ**

**ಉತ್ತರಿಸುವ ದಿನಾಂಕ : 10.12.2025**

**ಉತ್ತರಿಸುವ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಶುಸಂಗೋಪನೆ ಇಲಾಖೆಯಲ್ಲಿ ಬರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳು ಯಾವುವು; ಈ ಯೋಜನೆಗಳ ಅಡಿಯಲ್ಲಿ ಯಾವ ಯಾವ ಪಶುಗಳ ಸಾಕಾಣಿಕೆಗೆ ಪ್ರೋತ್ಸಾಹ ನೀಡಲಾಗುತ್ತದೆ; | **ಕೇಂದ್ರ ಹಾಗೂ ರಾಜ್ಯ ಸರ್ಕಾರದ ಈ ಕೆಳಕಂಡ ಯೋಜನೆಗಳ ಅಡಿಯಲ್ಲಿ ಪಶುಗಳ ಸಾಕಾಣಿಕೆಗೆ ಪ್ರೋತ್ಸಾಹ ನೀಡಲಾಗುತ್ತಿದೆ:**<br><br>**ಕೇಂದ್ರ ಪುರಸ್ಕೃತ ಯೋಜನೆ:**<br>1. ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆ- ವಿಪತ್ತು ನಿರ್ವಹಣೆ- ಜಾನುವಾರು ವಿಮಾ ಕಾರ್ಯಕ್ರಮ (LIVESTOCK INSURANCE) ಹಾಲು ಹಿಂಡುವ ರಾಸುಗಳ ವಿಮೆಯೊಂದಿಗೆ ಎತ್ತು / ಹೋರಿ / ಕೋಣ / ಮಣಕ / ಕುರಿ / ಮೊಲ/ಹಂದಿ/ದೇಶಿತಳಿ ರಾಸುಗಳನ್ನು ವಿಮೆಗೊಳಪಡಿಸ ಬಹುದಾಗಿದೆ.<br><br>2. ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ (NLM EDP)- ಕುರಿ/ಮೇಕೆ/ವರಾಹ/ದೇಶಿ ಕೋಳಿಗಳ ಘಟಕ ಸ್ಥಾಪನೆಗೆ ಯೋಜನಾ ಮೊತ್ತದ ಶೇ 50%ರವರೆಗೆ ಸಹಾಯಧನ ನೀಡಲಾಗುತ್ತಿದೆ. |
| ಆ) | ವಿವಿಧ ಪಶುಗಳ (ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಮೊಲ ಸಾಕಾಣಿಕೆ ಹಾಗೂ ಇತ್ಯಾದಿ) ಸಾಕಾಣಿಕೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನೀಡಲಾಗುವ ಸಾಲ ಹಾಗೂ ಪ್ರೋತ್ಸಾಹಧನಗಳು ಯಾವುವು; | 3. KCC (ಕಿಸಾನ್ ಕ್ರೆಡಿಟ್ ಕಾರ್ಡ್) ಪಶುಸಂಗೋಪನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಪಶುಪಾಲಕರ ಜಾನುವಾರುಗಳಿಗೆ ನಿರ್ವಹಣಾ ವೆಚ್ಚ ಭರಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ (5 % Interest Subvention)<br><br>4. ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಉತ್ಕೃಷ್ಟ ದರ್ಜೆಯ ಮೇವಿನ ಉತ್ಪಾದನೆ ಪ್ರೋತ್ಸಾಹಿಸಲು ಮೇವು ಬೀಜದ ಮಿನಿ ಕಿಟ್‌ಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.<br><br>5. ರಾಜ್ಯದಲ್ಲಿ ಒಟ್ಟು 275 ಸಂಚಾರಿ ಪಶುಚಿಕಿತ್ಸಾ ಘಟಕಗಳ ಮೂಲಕ (Mobile Veterinary Units) ರೈತರ ಮನೆ ಬಾಗಿಲಿಗೆ ಅಗತ್ಯ ಪಶುವೈದ್ಯಕೀಯ ತುರ್ತು ಚಿಕಿತ್ಸಾ ಸೇವೆಗಳನ್ನು ಒದಗಿಸಲಾಗುತ್ತಿದೆ. |

| | | |
|---|---|---|
| | | **ರಾಜ್ಯವಲಯ ಯೋಜನೆಗಳು**<br>1. ಹಾಲು ಉತ್ಪಾದಕರಿಗೆ ಉತ್ತೇಜನ ಯೋಜನೆಯಡಿ ರೈತರಿಗೆ ಪ್ರತಿ ಲೀಟರ್ ಗುಣಾತ್ಮಕ ಹಾಲಿಗೆ ರೂ.5/-ರಂತೆ ಪ್ರೋತ್ಸಾಹಧನ ಪಾವತಿಸಲಾಗುತಿದೆ.<br>2. ರಾಸುಗಳು ಆಕಸ್ಮಿಕ ಮರಣಹೊಂದಿದಾಗ ರಾಸುಗಳ ಮಾಲೀಕರಿಗೆ ಪರಿಹಾರಧನ ವಿತರಣೆ<br>3. ಆಕಸ್ಮಿಕ ಮರಣಹೊಂದಿದ ಕುರಿ/ಮೇಕೆಗಳ ಮಾಲೀಕರಿಗೆ ಅನುಗ್ರಹ ಕೊಡುಗೆ ಯೋಜನೆಯಡಿ ಪರಿಹಾರಧನ ವಿತರಣೆ<br>4. ಮೇವು ಕತ್ತರಿಸುವ ಯಂತ್ರಗಳ ವಿತರಣೆ<br>5. ಹಸುಗಳ ರಬ್ಬರ್ ನೆಲ ಹಾಸು ವಿತರಣೆ<br>6. ಉತ್ಕೃಷ್ಟ ದರ್ಜೆಯ ಮೇವಿನ ಉತ್ಪಾದನೆ ಪ್ರೋತ್ಸಾಹಿಸಲು ಮೇವು ಬೀಜದ ಮಿನಿ ಕಿಟ್ ಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.<br>7. ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ 10+1 ಕುರಿ/ಮೇಕೆ ಘಟಕ ವಿತರಣೆ<br>8. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ರೈತರಿಗೆ ಆಧುನಿಕ ಪಶುಪಾಲನಾ ಚಟುವಟಿಕೆಗಳ ಕುರಿತು ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>9. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ವತಿಯಿಂದ ಗ್ರಾಮೀಣ ಭಾಗದ ರೈತ ಮಹಿಳಾ ಫಲಾನುಭವಿಗಳಿಗೆ ತಲಾ 20 ರಂತೆ ಐದು ವಾರದ ದೇಶಿ/ ನಾಟಿ ಕೋಳಿಮರಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.<br>10. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ವತಿಯಿಂದ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ, ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿ ಕುರಿ/ಮೇಕೆ ಸಾಕಾಣಿಕೆಗೆ ಪ್ರೋತ್ಸಾಹಧನ/ಸಹಾಯಧನ ನೀಡಲಾಗುತ್ತಿದೆ. |
| ಇ) | ಯೋಜನೆಗಳಿಗೆ ಸಾಲ ಮತ್ತು ಪ್ರೋತ್ಸಾಹಧನ ಪಡೆಯಲು ಇರುವ ಅರ್ಹತೆ ಮತ್ತು ಮಾನದಂಡಗಳು ಯಾವುವು? ಸಾಲ ಮತ್ತು ಪ್ರೋತ್ಸಾಹಧನ ಪಡೆಯುವ ಬಗ್ಗೆ ವಿವರ ನೀಡುವುದು. | ಯೋಜನೆಗಳಿಗೆ ಸಾಲ ಮತ್ತು ಪ್ರೋತ್ಸಾಹಧನ ಪಡೆಯಲು ಇರುವ ಅರ್ಹತೆ ಮತ್ತು ಮಾನದಂಡಗಳ ಹಾಗೂ ಪ್ರೋತ್ಸಾಹಧನದ ಸಂಪೂರ್ಣ ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಈ) | ಇಲಾಖೆಯ ವಿವಿಧ ಯೋಜನೆಗಳಿಗೆ ಫಲಾನುಭವಿಗಳಾಗುವ ವಿವಿಧ ವರ್ಗಗಳ ಜನರಿಗೆ ಎಷ್ಟೆಷ್ಟು ಪ್ರೋತ್ಸಾಹಧನ ನೀಡಲಾಗುತ್ತದೆ. | ಇಲಾಖೆಯ ವಿವಿಧ ಯೋಜನೆಗಳಿಗೆ ಫಲಾನುಭವಿಗಳಾಗುವ ವಿವಿಧ ವರ್ಗಗಳ ಜನರಿಗೆ ಪ್ರೋತ್ಸಾಹ ಧನ ನೀಡಲಾಗುವ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಪಸಂಮೀ 252 ಸಲೆವಿ 2025**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

**ಅನುಬಂಧ-1**

**(ಪ್ರಶ್ನೆ ಸಂಖ್ಯೆ : 377 (456) - ಶ್ರೀ / ಶ್ರೀಮತಿ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ))**

**ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ಯಾವುವು : ಈ ಯೋಜನೆಗಳನ್ನು ಪಡೆಯಲು ಫಲಾನುಭವಿಗಳು ಅನುಸರಿಸಬೇಕಾದ ಮಾನದಂಡಗಳ ವಿವರ**

| ಕ್ರ. ಸಂ | ಯೋಜನೆಗಳು | ಘಟಕದ ವಿವರ | ಮಾನದಂಡಗಳು |
|---|---|---|---|
| 1 | **ಹಾಲು ಉತ್ಪಾದಕರಿಗೆ ಉತ್ತೇಜನ**<br>ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್ ಗುಣಾತ್ಮಕ ಹಾಲಿಗೆ ಪ್ರೋತ್ಸಾಹ ಧನ ಪಾವತಿಸಲಾಗುತ್ತಿದೆ. | ಪ್ರತಿ ಲೀಟರ್ ಹಾಲಿಗೆ ರೂ.5.00 | **ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರಾಗಿರಬೇಕು.**<br>**ಹಾಲಿನಲ್ಲಿ ಕನಿಷ್ಠ** 3.5 **ಫ್ಯಾಟ್ ಮತ್ತು ಕನಿಷ್ಠ** 8.5 **ಎಸ್.ಎನ್. ಎಫ್.**<br>**ಇರತಕ್ಕದು ಮತ್ತು ಕಲಬೆರಕೆಯಿಂದ ಮುಕ್ತವಾಗಿರಬೇಕು.**<br>**ಫಲಾನುಭವಿಯ** Fruits ID. |
| 2 | **ರಾಸುಗಳ ಆಕಸ್ಮಿಕ ಸಾವಿಗೆ ಆಪತ್ತುನಿಧಿ**<br>ರಾಸುಗಳು ಆಕಸ್ಮಿಕ ಮರಣ ಹೊಂದಿದಾಗ ರೈತರಿಗೆ ಉಂಟಾಗುವ ಆರ್ಥಿಕ ನಷ್ಟವನ್ನು ಭರಿಸಲು ಮರಣ ಹೊಂದಿದ ದನ, ಎಮ್ಮೆ, ಎತ್ತು, ಹೋರಿ ಮತ್ತು ಕಡಸುಗಳಿಗೆ ಪರಿಹಾರಧನವನ್ನು ರಾಸುಗಳ ಮಾಲೀಕರಿಗೆ ವಿತರಿಸಲಾಗುತ್ತಿದೆ. | ಪ್ರತಿ ಹಸು, ಎಮ್ಮೆ ಮತ್ತು ಎತ್ತುಗಳಿಗೆ ರೂ 15,000. | ಫಲಾನುಭವಿಯ **Fruits ID**<br>ರಾಸುಗಳು ವಿಮೆಗೆ ಒಳಪಡದ ರಾಸುಗಳಾಗಿರಬೇಕು.<br>ರಾಸುಗಳ ಮರಣೋತ್ತರ ಪರಿಕ್ಷೆಗೆ ಮುನ್ನ ಹಾಗೂ ಮರಣತ್ತೋರ ಪರಿಕ್ಷೆಯ ನಂತರ ಕಲರ್ ಬಾವಚಿತ್ರಗಳು ಕಡ್ಡಾಯ<br>ಒಂದು ಕುಟುಂಬದಲ್ಲಿ ಒಂದೇ ಪ್ರಕರಣದಲ್ಲಿ 5ಕ್ಕಿಂತ ಅದಿಕ ರಾಸುಗಳು ಮರಣ ಹೊಂದಿದಲ್ಲಿ ಕಡ್ಡಯವಾಗಿ ಪ್ರಯೋಗಲಾಯದ ಪ್ರಮಾಣ ಪತ್ರ ಸಲ್ಲಿಸುವುದು.<br>ಅಪಾಘತದಿಂದ ಮರಣ ಹೊಂದಿದ ಜಾನುವಾರುಗಳಿಗೆ ಪೋಲಿಸ್ ಇಲಾಖೆಯಿಂದ ಕಡ್ಡಯವಾಗಿ FIR ಪ್ರಮಾಣ ಪತ್ರ ಸಲ್ಲಿಸುವುದು. |
| 3 | **ಸಣ್ಣ ಪ್ರಾಣಿಗಳ ಆಕಸ್ಮಿಕ ಸಾವಿಗೆ ಆಪತ್ತುನಿಧಿ**<br>ಆಕಸ್ಮಿಕ ಮರಣ ಹೊಂದಿದ 3-6 ತಿಂಗಳ ವಯಸ್ಸಿನ ಕುರಿ/ ಮೇಕೆಗಳಿಗೆ ಹಾಗೂ 6 ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳಿಗೆ ಅವುಗಳ ಮಾಲೀಕರಿಗೆ ಪರಿಹಾರಧನ ವಿತರಣೆ ಮಾಡಲಾಗುತ್ತಿದೆ. | 3 ರಿಂದ 6 ತಿಂಗಳ ವಯಸ್ಸಿನ ಕುರಿ/ಮೇಕ ಮರಿಗಳಿಗೆ ತಲಾ ರೂ.5000 ರಂತೆ ಹಾಗೂ 6 ತಿಂಗಳು ಮೇಲ್ಪಟ್ಟ ಕುರಿ / ಮೇಕೆಗಳಿಗೆ ತಲಾ ರೂ.7500. | I. ಪರಿಹಾರ ಧನ ನೀಡುವಿಕೆಗೆ ವಿಮೆ ಮಾಡಿಸದ ಹಾಗೂ ಆಕಸ್ಮಿಕವಾಗಿ ಮರಣಿಸಿದ 3 ರಿಂದ 6 ತಿಂಗಳೊಳಗಿನ ಕುರಿ/ಮೇಕೆಗಳಿಗೆ ಮತ್ತು 6 ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳಗಿರಬೇಕು<br>ಮರಣ ಹೊಂದಿದ ಕುರಿ/ಮೇಕೆಗಳ ಜೊತೆಗೆ ಶವ ಪರೀಕ್ಷೆಯ ಮೊದಲು ಮತ್ತು ಶವ ಪರೀಕ್ಷೆಯ ನಂತರ, ಶವ ಪರೀಕ್ಷೆ ನಡೆಸಿದ ಸ್ಥಳೀಯ ಪಶು ವೈದ್ಯರು ಮತ್ತು ಫಲಾನುಭವಿಯ ಸಹಿತ GPS (Global Positioning System) ಕಲರ್ ಛಾಯಾ ಚಿತ್ರ ಕಡ್ಡಾಯವಾಗಿ ತೆಗೆಸಿ, ಮರಣೋತ್ತರ ಪರೀಕ್ಷೆ ಮಾಡಿದ ಪಶುವೈದ್ಯರು ದೃಢೀಕರಿಸಬೇಕು.<br>ಶವ ಪರೀಕ್ಷೆ ನಡೆಸಿದ ಪಶುವೈದ್ಯರು ಪ್ರತಿ ಕುರಿ/ಮೇಕೆಗಳಿಗೆ ಪ್ರತ್ಯೇಕ ಮರಣೋತ್ತರ ವರದಿ ಸಲ್ಲಿಸಬೇಕು.<br>ಸಾಂಕ್ರಾಮಿಕ ರೋಗಗಳಿಂದ ಮತ್ತು ವಿಷಪೂರಿತ ಆಹಾರ ಸೇವನೆ/ಗಿಡ, ಮರಗಳ ಸೊಪ್ಪು ಸೇವನೆಯಿಂದ 10 ಕ್ಕಿಂತ ಹೆಚ್ಚು ಕುರಿ/ಮೇಕೆ ಮರಿಗಳು ಏಕಕಾಲದಲ್ಲಿ ಮರಣ ಹೊಂದಿದ್ದಲ್ಲಿ ಪ್ರಾದೇಶಿಕ ಪ್ರಾಣಿ ಆರೋಗ್ಯ 4ಮತ್ತು ಜೈವಿಕ ಸಂಸ್ಥೆ ಪ್ರಯೋಗಾಲಯದಿಂದ ವರದಿ ಪಡೆದು ಪ್ರತಿ ಸಲ್ಲಿಸಬೇಕು.<br>ವಿಶೇಷ ಪ್ರಕರಣಗಳು ಅಂದರೆ, ಪ್ರಕೃತಿ ವಿಕೋಪ ಇತ್ಯಾದಿ ಪ್ರಕರಣಗಳಲ್ಲಿ ಕುರಿ/ಮೇಕೆ/ಮರಿಗಳು ಮರಣಿಸಿದರೆ ರಾಷ್ಟ್ರೀಯ ಪ್ರಕೃತಿ ವಿಕೋಪ ಪರಿಹಾರ ನಿಧಿ (NDRF) ಮತ್ತು ಇತರೆ ಇಲಾಖೆಗಳಾದ ಅರಣ್ಯ / KPTCL/ ಕಂದಾಯ ಇಲಾಖೆಯ ಅಡಿಯಲ್ಲಿ ಪರಿಹಾರ ಧನ ಮಂಜೂರಾತಿ ಪಡೆದಲ್ಲಿ ಸದರಿ |

<table>
<tr>
<td></td>
<td></td>
<td></td>
<td>ಮಂಜೂರಾತಿ ಆದೇಶದೊಂದಿಗೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ಮಾತ್ರ ಮಂಜೂರು ಮಾಡಲಾಗುವುದು.<br>ಅಕಾಲಿಕ ಮರಣ ಹೊಂದಿದ ಕುರಿ/ಮೇಕೆ/ಮರಿಗಳಿಗೆ ಪರಿಹಾರ ನೀಡುವ ಕುರಿತು ಪರಿಶೀಲನಾ ಮತ್ತು ಶಿಫಾರಸ್ಸು ಸಮಿತಿ ರಚಿಸಲಾಗಿದೆ.</td>
</tr>
<tr>
<td>4</td>
<td>ರಬ್ಬರ್ ನೆಲಹಾಸುಗಳ ವಿತರಣೆ<br>ಕನಿಷ್ಠ ಎರಡು ಜಾನುವಾರು ಹೊಂದಿರುವ ಅರ್ಹ ಫಲಾನುಭವಿಗಳಿಗೆ ಎರಡು ನೆಲ ಹಾಸುಗಳನ್ನು ವಿತರಿಸಲಾಗುವುದು.</td>
<td><table>
<tr><th>ಘಟಕದ ವೆಚ್ಚ</th><th>ಸಹಾಯಧನ (50 %)</th><th>ಫಲಾನುಭವಿಗಳ ವಂತಿಕೆ / ಬ್ಯಾಂಕ್ ಸಾಲ (50%)</th></tr>
<tr><td>ರೂ.2849</td><td>ರೂ.1424.50</td><td>ರೂ.1424.50</td></tr>
</table></td>
<td>ಫಲಾನುಭವಿಗಳು ಜಾನುವಾರು (ಹಸು/ಎಮ್ಮೆ) ಹೊಂದಿರಬೇಕು.<br>ಫಲಾನುಭವಿಗಳು ಶೇ: 50ರಷ್ಟು ವಂತಿಕೆಯನ್ನು ಪಾವತಿಸಬೇಕಾಗಿದ್ದು ಮೊದಲು ಮನವಿ ಸಲ್ಲಿದವರಿಗೆ ಆದ್ಯತೆ ನೀಡಲಾಗುವುದು.<br>ಸಮಾಜ ಕಲ್ಯಾಣ ಇಲಾಖೆಯ ಮಾರ್ಗಸೂಚಿಗಳಂತೆ ರೋಸ್ಟರ್ ಪದ್ಧತಿ ಅನುಸರಿಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು.<br>ಒಂದು ವೇಳೆ ಹೆಚ್ಚಿನ ಬೇಡಿಕೆ ಬಂದಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿತವಾಗಿರುಮತಾಲ್ಲೂಕಿನ ಫಲಾನುಭಿಗಳ ಆಯ್ಕೆ ಸಮಿತಿಯ ಸಭೆಯಲ್ಲಿ ಸ್ವೀಕೃತ ಅರ್ಜಿಗಳನ್ನು ಮಂಡಿಸಿ ಆಯ್ಕೆ ಮಾಡುವುದು.</td>
</tr>
<tr>
<td>5</td>
<td>ಮೇವು ಕತ್ತರಿಸುವ ಯಂತ್ರಗಳ ವಿತರಣೆ<br>2 ಹೆಚ್.ಪಿ ಸಾಮರ್ಥ್ಯದ ಮೇವು ಕತ್ತರಿಸುವ ಯಂತ್ರಗಳನ್ನು (Chaff Cutter) ಜಾನುವಾರು ಹಾಗೂನೀರಾವರಿ ಜಮೀನು ಹೊಂದಿರುವ ಅರ್ಹ ಫಲಾನುಭವಿಗಳಿಗೆ ಆದ್ಯತೆ ಮೇರೆಗೆ ನೀಡಲಾಗುವುದು.</td>
<td><table>
<tr><th>ಘಟಕದ ವೆಚ್ಚ</th><th>ಸಹಾಯಧನ (50 %)</th><th>ಫಲಾನುಭವಿಗಳ ವಂತಿಕೆ/ಬ್ಯಾಂಕ್ ಸಾಲ (50%)</th></tr>
<tr><td>ರೂ.34000</td><td>ರೂ.17000</td><td>ರೂ.17000</td></tr>
</table></td>
<td>ಫಲಾನುಭವಿಗಳು ಶೇ: 50ರಷ್ಟು ವಂತಿಕೆಯನ್ನು ಪಾವತಿಸಬೇಕಾಗಿದ್ದು ಮೊದಲು ಮನವಿ ಸಲ್ಲಿದವರಿಗೆ ಆದ್ಯತೆ ನೀಡಲಾಗುವುದು.<br>ಸಮಾಜ ಕಲ್ಯಾಣ ಇಲಾಖೆಯ ಮಾರ್ಗಸೂಚಿಗಳಂತೆ ರೋಸ್ಟರ್ ಪದ್ಧತಿ ಅನುಸರಿಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು.<br>ಒಂದು ವೇಳೆ ಹೆಚ್ಚಿನ ಬೇಡಿಕೆ ಬಂದಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿತವಾಗಿರುಮತಾಲ್ಲೂಕಿನ ಫಲಾನುಭಿಗಳ ಆಯ್ಕೆ ಸಮಿತಿಯ ಸಭೆಯಲ್ಲಿ ಸ್ವೀಕೃತ ಅರ್ಜಿಗಳನ್ನು ಮಂಡಿಸಿ ಆಯ್ಕೆ ಮಾಡುವುದು.</td>
</tr>
<tr>
<td>6</td>
<td>ಜಾನುವಾರು ವಿಮಾ ಯೋಜನೆ<br>ಯೋಗವುಳ್ಳ ಒಂದು ವರ್ಷ ಮೇಲ್ಪಟ್ಟ ಮತ್ತು ಗರಿಷ್ಟ ವಯಸ್ಸು 8 ವರ್ಷಗಳಿಗೆ ಮೀರದಂತಹ ಮಣಕ /ಆಕಳು / ಎಮ್ಮೆಗಳನ್ನು ಒಂದು ವರ್ಷದ/ ಮೂರು ವರ್ಷದ ಅವಧಿಗೆ ಗರಿಷ್ಟ ರೂ. 70 ಸಾವಿರ ಮೂಲ ಬೆಲೆಯವರೆಗೆ ಪ್ರೀಮಿಯಂ ಸಹಾಯಧನ ದರದಂತೆ ವಿಮೆ ಸೌಲಭ್ಯ ಒದಗಿಸುವುದು.</td>
<td><table>
<tr><th>ಸಹಾಯಧನ</th><th>ಫಲಾನುಭವಿಯವಂತಿಗೆ</th></tr>
<tr><td>85%</td><td>15%</td></tr>
</table>ಪ್ರೀಮಿಯಂ ದರ ಒಂದು ವರ್ಷಕ್ಕೆ ವಿಮಾ ಮೊತ್ತಕೆ ಶೇ 3.78, ಎರಡು ವರ್ಷಕ್ಕೆ ವಿಮಾ ಮೊತ್ತಕ್ಕೆ ಶೇ.7.56 ಮತ್ತು ಮೂರು ವರ್ಷಕ್ಕೆ ವಿಮಾ ಮೊತ್ತಕೆ ಶೇ 11.</td>
<td>ವಿಮೆಗೊಳಪಡಿಸುವ ಜಾನುವಾರುವಿನ ಆರೋಗ್ಯ ದೃಢೀಕರಣ ಪ್ರಮಾಣ ಪತ್ರ- ಸ್ಥಳೀಯ ಪಶುವೈದ್ಯರಿಂದ ದೃಢೀಕರಣ<br>ವಿಮೆಗೊಳಪಡಿಸಲಾಗುವ ಜಾನುವಾರುವಿನ ಮಾಲೀಕರ ಆಧಾರ್ ಕಾರ್ಡ್<br>ವಿಮೆಗೊಳಪಡಿಸಲಾಗುವ ಜಾನುವಾರುವಿನ ಭಾವ ಚಿತ್ರ. ಸದರಿ ಜಾನುವಾರುವಿನ ಮಾಲೀಕರೊಂದಿಗೆ.</td>
</tr>
</table>

<table>
<tr>
<td>7</td>
<td>10 ಹೆಣ್ಣು +1 ಗಂಡು ಕುರಿ / ಮೇಕೆ ವಿತರಣೆ<br>ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಲ್ಲಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ ಮತ್ತು ಪಂಗಡ ಸದಸ್ಯರುಗಳಿಗೆ (10+1) ಕುರಿ / ಮೇಕೆ ಘಟಕಗಳ ವಿತರಣೆ.</td>
<td><table>
<tr><th>ಘಟಕದ ವೆಚ್ಚ</th><th>ಸಹಾಯಧನ (90 %)</th><th>ಫಲಾನುಭವಿಗಳ ವಂತಿಕೆ / ಬ್ಯಾಂಕ್ ಸಾಲ (10%)</th></tr>
<tr><td>ರೂ.100000</td><td>ರೂ.90000</td><td>ರೂ.10000</td></tr>
</table></td>
<td>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು.<br><br>ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3), ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.<br><br>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳು RD No. ಇರುವ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು.<br><br>ಅರ್ಜಿದಾರರು FRUITS ತಂತ್ರಾಂಶದಲ್ಲಿ ನೊಂದಾಯಿಸಿರಬೇಕು</td>
</tr>
<tr>
<td>8</td>
<td>ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ: ಕೋಳಿ ಮರಿ ವಿತರಣೆ<br>ಪ್ರತಿ ಫಲಾನುಭವಿಗೆ 5 ವಾರದ 20 ನಾಟಿ ಕೋಳಿಮರಿ ವಿತರಣೆ</td>
<td><table>
<tr><th>ಘಟಕದ ವೆಚ್ಚ</th><th>ಸಹಾಯಧನ (100 %)</th><th>ಫಲಾನುಭವಿಗಳ ವಂತಿಕೆ / ಬ್ಯಾಂಕ್ ಸಾಲ (0%)</th></tr>
<tr><td>ರೂ.2600/-</td><td>ರೂ.2600/-</td><td>ರೂ.0.00</td></tr>
</table></td>
<td>ಭಾವಚಿತ್ರ ಸಹಿತದ ಗುರುತಿನ ಚೀಟಿ / ಆಧಾರ್ ಕಾರ್ಡ್ ಪ್ರತಿ<br><br>ಬಿ.ಪಿ.ಎಲ್. ಕಾರ್ಡ್ ಪ್ರತಿ<br><br>ಅರ್ಜಿ ನಮೂನೆಯನ್ನು ಸಂಪೂರ್ಣವಾಗಿ ಭರ್ತಿ ಮಾಡಿ ಸಲ್ಲಿಸಬೇಕು, ಅಪೂರ್ಣವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ, ಅರ್ಜಿ ಮತ್ತು ದಾಖಲಾತಿಗಳನ್ನು ಕಡ್ಡಾಯವಾಗಿ ದ್ವಿಪ್ರತಿಯಲ್ಲಿ ಸಲ್ಲಿಸಬೇಕು,<br><br>ಸಾಮಾನ್ಯ ಫಲಾನುಭವಿ ಹೊರತುಪಡಿಸಿ, ಮೀಸಲಾತಿ ಬಯಸುವವರು ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸುವುದು.</td>
</tr>
</table>

## ಅನುಬಂಧ-2

| ಕ್ರ. ಸಂ. | ಯೋಜನೆ ವಿವರ | ಸಾಮಾನ್ಯ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
|---|---|---|---|---|
| 1 | ಹಾಲು ಉತ್ಪಾದಕರಿಗೆ ಉತ್ತೇಜನ | **ರೂ.5/-ರಂತೆ ಪ್ರತಿ ಲೀ. ಹಾಲಿಗೆ ಪ್ರೋತ್ಸಾಹ ಧನ** | | |
| 2 | ರಾಸುಗಳ ಆಕಸ್ಮಿಕ ಸಾವಿಗೆ ಆಪತ್ತುನಿಧಿ | ಎಲ್ಲಾ ವರ್ಗದವರಿಗೆ ಮೃತಪಟ್ಟ ಹಸು / ಎಮ್ಮೆ / ಎತ್ತುಗಳಿಗೆ ರೂ.15,000/- | | |
| 3 | ಸಣ್ಣ ಪ್ರಾಣಿಗಳ ಆಕಸ್ಮಿಕ ಸಾವಿಗೆ ಆಪತ್ತು ನಿಧಿ | ಎಲ್ಲಾ ವರ್ಗದವರಿಗೆ 3 ರಿಂದ 6 ತಿಂಗಳ ವಯಸ್ಸಿನ ಕುರಿ / ಮೇಕೆ ಮರಿಗಳಿಗೆ ತಲಾ ರೂ.5000/- ರಂತೆ ಹಾಗೂ 6 ತಿಂಗಳು ಮೇಲ್ಪಟ್ಟ ಕುರಿ/ಮೇಕೆಗಳಿಗೆ ತಲಾ ರೂ.7500/- | | |
| 4 | ರಬ್ಬರ್ ನೆಲಹಾಸುಗಳ ವಿತರಣೆ | ಎಲ್ಲಾ ವರ್ಗದವರಿಗೆ ಶೇ.50 ರಷ್ಟು ಸಹಾಯಧನದಲ್ಲಿ ಫಲಾನುಭವಿಗಳಿಗೆ ವಿತರಿಸಲಾಗುವುದು | | |
| 5 | ಮೇವು ಕತ್ತರಿಸುವ ಯಂತ್ರಗಳ ವಿತರಣೆ | ಎಲ್ಲಾ ವರ್ಗದವರಿಗೆ ಶೇ.50 ರಷ್ಟು ಸಹಾಯಧನದಲ್ಲಿ ಫಲಾನುಭವಿಗಳಿಗೆ ವಿತರಿಸಲಾಗುವುದು | | |
| 6 | ಜಾನುವಾರು ವಿಮಾ ಯೋಜನೆ | ಎಲ್ಲಾ ವರ್ಗದವರಿಗೆ ಶೇ.85 ರಷ್ಟು ಸಹಾಯಧನದಲ್ಲಿ ಫಲಾನುಭವಿಗಳ ಜಾನುವಾರುಗಳಿಗೆ ವಿಮಾ ಸೌಲಭ್ಯ ಒದಗಿಸಲಾಗುವುದು | | |
| 7 | 10 ಹೆಣ್ಣು +1 ಗಂಡು ಕುರಿ / ಮೇಕೆ ವಿತರಣೆ | - | ಪ.ಜಾತಿ ಮತ್ತು ಪ.ಪಂಗಡದ ಫಲಾನುಭವಿಗಳಿಗೆ ಶೇ.90ರ ಸಹಾಯಧನದಲ್ಲಿ ವಿತರಿಸಲಾಗುವುದು | |
| 8 | ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ: ಕೋಳಿ ಮರಿ ವಿತರಣೆ | ಎಲ್ಲಾ ವರ್ಗದವರಿಗೆ ಶೇ.100 ರಷ್ಟು ಸಹಾಯಧನದಲ್ಲಿ ಪ್ರತಿ ಫಲಾನುಭವಿಗೆ 20 ನಾಟಿ ಕೋಳಿ ಮರಿಗಳನ್ನು ವಿತರಿಸಲಾಗುವುದು | | |